


# SSLC-PUC ಮಾರ್ಗದರ್ಶಿ

ಈ ಬಾರಿ ಹತ್ತನೆಯ ತರಗತಿಯ ಸುಮಾರು 12 ಕೋಟಿ ಮತ್ತು ಪಿಯುಸಿ ಹಂತದ 1.5 ಕೋಟಿ ವಿದ್ಯಾರ್ಥಿಗಳು ವಿಶ್ವದಾಖಲೆ ಬರೆಯಲಿದ್ದಾರೆ. ಆನ್‌ಲೈನ್ ಮತ್ತು ಆಫ್‌ಲೈನ್ ಎರಡರಲ್ಲೂ ವಿದ್ಯಾಭ್ಯಾಸ ಮಾಡಿ ಪರೀಕ್ಷೆ ಎದುರಿಸಲಿರುವ ಭಾರತದ ಮೊಟ್ಟ ಮೊದಲ ವಿದ್ಯಾರ್ಥಿ ಸಮೂಹ ಇದಾಗಿದ್ದು, ಪರೀಕ್ಷೆಯ ಫಲಿತಾಂಶ ಮುಂಬರುವ ದಿನಗಳ ಶಿಕ್ಷಣದ ದಿಕ್ಸೂಚಿಯಾಗಲಿದೆ ಎಂಬ ಮಾತಿದೆ. ಕೇವಲ ನಾಲ್ಕೈದು ತಿಂಗಳಿನ ಶಾಲಾ ಕಾಲೇಜು ದಿನಗಳಿರುವ ಹೈಬ್ರಿಡ್ ಶೈಕ್ಷಣಿಕ ವರ್ಷವಿದು. 'ಪಾಠ ಶುರುವಾಯಿತು' ಎನ್ನುವಷ್ಟರಲ್ಲೇ ಪರೀಕ್ಷೆಗಳು ಹತ್ತಿರವಾಗಿವೆ. ಶೈಕ್ಷಣಿಕ ವರ್ಷದ ಆರಂಭದ ಕೆಲವೇ ದಿನಗಳಲ್ಲಿ ಕರ್ನಾಟಕದಲ್ಲಿ ಪರೀಕ್ಷಾ ದಿನಾಂಕ ಪ್ರಕಟಗೊಂಡಿದ್ದೂ ಇದೇ ಮೊದಲು.

2020ರ ಮಾರ್ಚ್‌ನಲ್ಲಿ ಸ್ಫೋಟಗೊಂಡ 'ಕೋವಿಡ್ 19' ಪಿಡುಗು ನಮ್ಮ ಶಿಕ್ಷಣ ವ್ಯವಸ್ಥೆಗೆ ಈ ಪರಿಯ ಹೊಡೆತ ಕೊಡುತ್ತದೆಂಬ ಕಲ್ಪನೆಯೇ ಇರಲಿಲ್ಲ. ನೋಡನೋಡುತ್ತಿದ್ದಂತೆ ಎಲ್ಲವೂ ಬದಲಾಯಿತು. ಆನ್‌ಲೈನ್ ಪಾಠವೆಂಬ ಹೈಬ್ರಿಡ್ ಮಾಡೆಲ್‌ಗೆ ಶಿಕ್ಷಕ ವಿದ್ಯಾರ್ಥಿಗಳಿಬ್ಬರೂ ಒಗ್ಗಿಕೊಳ್ಳಬೇಕಾಯಿತು. ಇಷ್ಟವಿರದಿದ್ದರೂ ನಗರ, ಅರೆ ನಗರ ಪ್ರದೇಶದ ಜನ ಹೊಸ ಮಾದರಿಯನ್ನು ಒಪ್ಪಿಕೊಂಡರು. ಹೊಟ್ಟೆ ತುಂಬ ಊಟವನ್ನೇ ಸರಿಯಾಗಿ ಕಾಣದ ಗ್ರಾಮೀಣ ಪ್ರದೇಶದ ಅನೇಕ ಮಕ್ಕಳು ಪುಸ್ತಕ, ಶಾಲೆಗಳನ್ನೇ ಮರೆಯುವಂತಾಯಿತು. ಮಕ್ಕಳ ನೆರವಿಗೆ 'ವಿದ್ಯಾಗಮ' ಎಂಬ ನೂತನ ಯೋಜನೆ ಜಾರಿಗೆ ಬಂತಾದರೂ, ಅದು ಸದೃಢವಾಗುವ ಮುನ್ನವೇ ವಿವಾದಕ್ಕೀಡಾಯಿತು. ಯಾವ ಎಳೆಯ ಕೈಗಳಿಗೆ ಮೊಬೈಲ್ ಬೇಡ ಎಂದು ನಿರ್ಧಾರವಾಗಿತ್ತೋ, ಆ ಕೈಗಳಿಗೆ ಅನಿವಾರ್ಯವಾಗಿ ಮೊಬೈಲು, ಟ್ಯಾಬುಗಳನ್ನು ಕೊಟ್ಟು ಪಾಠದ ಹೆಸರಿನಲ್ಲಿ ಮಕ್ಕಳನ್ನು ಖಿನ್ನತೆ, ಮಾನಸಿಕ ಒತ್ತಡ, ಕಣ್ಣು, ಕತ್ತು, ಬೆನ್ನಿನ ಸಮಸ್ಯೆಗಳ ಸುಳಿಗೆ ದೂಡುವುದು ಅನಿವಾರ್ಯವಾಯಿತು.

## ಮಂಕಾದ ದೃಷ್ಟಿ, ಬದಲಾದ ಕಲಿಕೆ

ಕೊರೊನಾ ಹಾವಳಿಯಿಂದ ಕಳೆದ ಶೈಕ್ಷಣಿಕ ವರ್ಷದ ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ಪರೀಕ್ಷೆಗಳು ಮುಗಿದು ಫಲಿತಾಂಶ ಬಂದಾಗ ಜುಲೈ ತಿಂಗಳಾಗಿತ್ತು. ಅಷ್ಟರಲ್ಲಾಗಲೇ 9ನೇ ತರಗತಿ ಮುಗಿಸಿ 10ನೇ ತರಗತಿಗೆ ಮತ್ತು ಪ್ರಥಮ ಪಿಯುಸಿ ಮುಗಿಸಿ ದ್ವಿತೀಯ ಪಿಯುಸಿಗೆ ಬಂದಿದ್ದ ವಿದ್ಯಾರ್ಥಿಗಳಿಗೆ ಆನ್‌ಲೈನ್ ಪಾಠ ಶುರುವಾಗಿತ್ತು. ಆರಂಭದಲ್ಲಿ ಆಸಕ್ತಿ ತೋರಿಸಿದ ಮಕ್ಕಳು ಕ್ರಮೇಣ ಮಂಕಾಗಿ ಹೆಸರಿಗಷ್ಟೇ ಆನ್‌ಲೈನ್ ತರಗತಿಯಲ್ಲಿದ್ದಂತೆ ಮಾಡಿ ಮೊಬೈಲ್‌ನಲ್ಲಿ ಗೇಮ್ ಆಡುತ್ತ, ಬೇಡದ ಮಾಹಿತಿ ಹುಡುಕುತ್ತಾ ಕಾಲ ಕಳೆಯತೊಡಗಿದರು. ಕಷ್ಟಪಟ್ಟು ಹೊಸ